ಮಲೆನಾಡು ಅಭಿವೃದ್ಧಿ ಮಂಡಳಿಗೆ ಆರ್ಥಿಕ ನೆರವು

194 (1011) ಶ್ರೀ ಕರಿಯಣ್ಣ (ಹೊಳೇಹೂನ್ನೂರು)

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಗೆ ಯಾವಾಗ ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಅದರ ಕೆಲಸ ಕಾರ್ಯಗಳನ್ನು ಪ್ರಾರಂಭಿಸಲಾಗಿದೆಯೇ ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಸಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಚನೆಯಾಗಲಿದೆ. ರಚನೆಯಾದ ನಂತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಮಂಡಳಿಗೆ ಹಣವನ್ನು ಬಿಡುಗಡೆ ಮಾಡಲಾಗುವುದು.

ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಒಳಚರಂಡಿ

223 (852) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ವಿಜ್ಞಾನ, ಯಂತ್ರಕಲೆ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಪುನರ್ವಸತಿ ತಾಲ್ಲೂಕುಗಳಾದ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಒಳಚರಂಡಿ ಯೋಜನೆ ಕೈಗೊಳ್ಳಬೇಕೆಂದು ಪರಿಸರ ಸಚಿವರಾದ ಮಾನ್ಯ ದಿ. ಶ್ರೀ ಬಸವಲಿಂಗಪ್ಪನವರು ಕ್ರ.ಸ.ಎನ್. ಇಇಎಂಎಲ್ಎ 25/91–92 ದಿನಾಂಕ 23–3–92ರಂದು ಕಾರ್ಯದರ್ಶಿ ನೀರಾವರಿ ಇಲಾಖೆ, ಬೆಂಗಳೂರು ಹಾಗೂ ನೀರಾವರಿ ಇಲಾಖೆ, ಬೆಂಗಳೂರು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ ಉತ್ತರವಲಯ (ಮಲಪ್ರಭಾ ಪ್ರಾಜೆಕ್ಟ್, ಬೆಳಗಾವಿ) ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ ಹಾಗಿದ್ದಲ್ಲಿ ಮಾನ್ಯ ಸಚಿವರ ಆದೇಶದ ಪ್ರಕಾರ ಒಳಚರಂಡಿ ಯೋಜನೆ ಕೈಗೊಳ್ಳಲು ಸರ್ಕಾರದವರು ಕೈಗೊಂಡ ಕ್ರಮಗಳಾವುವು;

ಆ) ಪುನಃ ಪರಿಸರ ಸಚಿವರಾದ ಮಾನ್ಯ ದಿ. ಶ್ರೀ ಬಸವಲಿಂಗಪ್ಪನವರು ದಿನಾಂಕ 8–9–92ರಂದು ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಒಳಚರಂಡಿ ಯೋಜನೆ ಕೈಗೊಳ್ಳಬೇಕೆಂದು ಹಾಗೂ ಒಳಚರಂಡಿ ಕೈಗೊಳ್ಳದೇ ಇದ್ದ ಕಾರಣ ನೀರಾವರಿ ಇಲಾಖೆ, ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಮಲಪ್ರಭಾ ಪ್ರಾಜೆಕ್ಟ್, ಬೆಳಗಾವಿ ಇವರ ಮೇಲೆ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿದ ಸಂಗತಿ ನಿಜವೆ;

ಇ) ಹಾಗಿದ್ದಲ್ಲಿ, ಮಾನ್ಯ ಮಂತ್ರಿಗಳ ಆದೇಶದ ಪ್ರಕಾರ ನೀರಾವರಿ ಅಧಿಕಾರಿಗಳ ಮೇಲೆ ಒಳಚರಂಡಿ ಯೋಜನೆಯನ್ನು ಮಾಡದೇ ಇದ್ದ ಕಾರಣ ಇವರ ವಿರುದ್ಧ, ಕೈಗೊಂಡ ಕ್ರಮಗಳಾವುವು;

ಈ) ದಿನಾಂಕ 12–1–93ರಂದು ನೀರಾವರಿ ಸಚಿವರುಗಳ ಪರವಾಗಿ ಕಂದಾಯ ಸಚಿವರು ವಿಧಾನ ಸಭೆಯಲ್ಲಿ ಶ್ರೀ ಶಿವಾನಂದ ಹೆಚ್. ಕೌಜಲಗಿ ಇವರು ಕೃಷ್ಣ ಪ್ರಾಜೆಕ್ಟ್ ದರ್ಜೆಯಲ್ಲಿ ಕೇಳಿದ ಪ್ರಶ್ನೆಗೆ

ಒಳಚರಂಡಿ ಯೋಜನೆ ಮಾಡುವುದಾಗಿ ಆಶ್ವಾಸನೆ ಕೊಟ್ಟ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಮಾನ್ಯ ಸಚಿವರ ಆಶ್ವಾಸನೆ ಪ್ರಕಾರ ಒಳಚರಂಡಿ ಯೋಜನೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳಾವುವು ?

ಶ್ರೀ ಎನ್.ಜಿ. ಹಾಲಪ್ಪ (ವಿಜ್ಞಾನ, ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿಯ ರಾಜ್ಯ ಸಚಿವರು):–

ಅ) ಹೌದು, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರಾಗಿದ್ದ ದಿವಂಗತ ಶ್ರೀ ಬಸವಲಿಂಗಪ್ಪನವರು ದಿನಾಂಕ 23–3–92ರ ಪತ್ರದಲ್ಲಿ ಆದೇಶಿಸಿದಂತೆ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ದಿನಾಂಕ 20–4–92ರಂದು ಒಂದು ದೀರ್ಘ ಪತ್ರ ಬರೆದು ಎಲ್ಲಾ ಆಗತ್ಯ ಕ್ರಮಗಳನ್ನು ಪರಿಸರ (ರಕ್ಷಣಾ ಕಾಯ್ದೆ) 1986 ಕಾಯ್ದೆ 3ಮತ್ತು 5ರತ್ತ ಗಮನ ಸೆಳೆದು, ಅದರ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೋರಲಾಗಿತ್ತು. ನೀರಾವರಿ ಇಲಾಖೆಯು ಈಗಾಗಲೇ ಮುಖ್ಯ ಅಭಿಯಂತರು (ಉತ್ತರ) ಬೆಳಗಾವಿ ಇವರಿಗೆ ಪತ್ರ ಬರೆದು ಜಾಗ್ರತೆಯಾಗಿ ಒಂದು ವರದಿ ಕಳುಹಿಸಿಕೊಡಬೇಕೆಂದು ಈ ಇಲಾಖೆಗೆ ತಿಳಿಸಿರುತ್ತಾರೆ. ಉತ್ತರವು ಸದ್ಯದಲ್ಲಿ ಬರುವ ನಿರೀಕ್ಷೆಯಿದೆ.

ಆ) ಹೌದು, – ಅದೇ –

ಇ) ಈ ವಿಷಯದ ಮೇಲೆ ಈಗಾಗಲೇ ಮುಖ್ಯ ಅಭಿಯಂತರರು (ಉತ್ತರ), ಬೆಳಗಾವಿ ಇವರೊಡನೆ ಪತ್ರ ವ್ಯವಹಾರ ನಡೆದಿದ್ದು, ಉತ್ತರವನ್ನು ನಿರೀಕ್ಷಿಸಲಾಗಿದೆ.

ಈ) ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದಿಂದ ಕಂದಾಯ ಸಚಿವರು ಕೊಟ್ಟಿರುವ ಆಶ್ವಾಸನೆಯು ಇದುವರೆವಿಗೂ ಈ ಇಲಾಖೆಗೆ ಬಂದಿರುವುದಿಲ್ಲ. ಆಶ್ವಾಸನೆಯು ಬಂದ ನಂತರ ಆಶ್ವಾಸನೆಯನ್ನು ಈಡೇರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬಸ್ ದರ ಏರಿಕೆಯ ನಂತರದ ಆದಾಯ

209 (935) ಶ್ರೀ ಪಿ.ಜಿ.ಆರ್. ಸಿಂಧ್ಯಾ, (ಕನಕಪುರ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಸ್ತೆ ಸಾರಿಗೆ ಸಂಸ್ಥೆಯ ದರಗಳನ್ನು ಪರಿಷ್ಕರಿಸಿದ ನಂತರ ಸಾರಿಗೆ ಸಂಸ್ಥೆಗೆ ಪ್ರತಿದಿನ ಬರುತ್ತಿರುವ ಹಣ ಎಷ್ಟು; ಹಾಗೂ ಪರಿಷ್ಕರಿಸುವ ಮುನ್ನ ಬರುತ್ತಿದ್ದ ಹಣ ಎಷ್ಟು;

ಆ) ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಬಸ್ ಪ್ರಯಾಣ ದರಗಳನ್ನು ಪರಿಷ್ಕರಿಸುವ ಮುನ್ನ ಹಾಗೂ ಪರಿಷ್ಕರಿಸಿದ ನಂತರದ ಆದಾಯವನ್ನು ಈ ಕೆಳಗೆ ನಮೂದಿಸಲಾಗಿದೆ.